ಮೀಸಲಾತಿಯ ಪ್ರಕ್ರಿಯೆಯನ್ನು ಮುಗಿಸಿ ದಿನಾಂಕ 31–07–2007ರೊಳಗೆ ಚುನಾವಣಾ ಆಯೋಗಕ್ಕೆ ಸಲ್ಲಿಸುತ್ತಿದ್ದೇವೆ. ನಂತರ ಚುನಾವಣಾ ಆಯೋಗದವರು ಚುನಾವಣೆ ದಿನಾಂಕವನ್ನು ಪ್ರಕಟ ಮಾಡುವುದರ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ. ಸರ್ಕಾರಕ್ಕೆ ಕೋರ್ಟ್‌ಗಳು ಪ್ರತಿನಿತ್ಯ ಛೀಮಾರಿ ಹಾಕುತ್ತಿವೆಂದು ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು. ಆದ್ದರಿಂದ, ಅವರ ಗಮನಕ್ಕೆ ತರುವುದೇನೆಂದರೆ, ಅದೇ ಕೋರ್ಟ್‌ನವರು 8 ವಾರಗಳ ಗಡುವನ್ನು ಕೊಟ್ಟಿರತಕ್ಕಂಥ ಆಧಾರದ ಮೇಲೆಯೇ ಈ ಒಂದು ಪ್ರಕ್ರಿಯೆಯನ್ನು ನಡೆಸುತ್ತಿದ್ದೇವೆ. ಆದ್ದರಿಂದ ಸರ್ಕಾರ ಚುನಾವಣೆಯ ದಿನಾಂಕವನ್ನು ಮುಂದೆ ಹಾಕತಕ್ಕಂಥ ಪ್ರಶ್ನೆ ಬರುವುದಿಲ್ಲ. ಸರ್ಕಾರ ಕಾನೂನಿನ ಚೌಕಟ್ಟಿನೊಳಗೆ ಚುನಾವಣೆಯ ಪ್ರಕ್ರಿಯೆಯನ್ನು ಮಾಡುತ್ತದೆ. ಈ ಚುನಾವಣೆ ಪ್ರಕ್ರಿಯೆ ಮುಗಿದ ಕೂಡಲೇ ಚುನಾವಣೆಯ ದಿನಾಂಕವನ್ನು ನಿಗದಿ ಮಾಡುವುದಕ್ಕೆ ಚುನಾವಣಾ ಆಯೋಗಕ್ಕೆ ವರದಿಯನ್ನು ಸಲ್ಲಿಸುತ್ತೇವೆ. ಚುನಾವಣಾ ಆಯೋಗ ಚುನಾವಣೆಯ ದಿನಾಂಕವನ್ನು ಪ್ರಕಟ ಮಾಡುತ್ತದೆ. ಮಾನ್ಯ ವಾಟಾಳ್ ನಾಗಾರಾಜ್‌ರವರು ನಮಗಿಂತ ಅನುಭವಸ್ಥರು, ಚುನಾವಣೆಯ ದಿನಾಂಕವನ್ನು ನೀವು ಪ್ರಕಟಿಸಿ ಎಂದು ಕೇಳಿದರೆ ನಾವು ಹೇಗೆ ಪ್ರಕಟ ಮಾಡುವುದಕ್ಕೆ ಆಗುತ್ತದೆ?

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ಧೋರಣೆಯನ್ನು ವಿರೋಧಿಸಿ ನಾನೂ ಕೂಡ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)